Misappropriation of Municipal Funds at Srinivasapur.

Q.—754. **Sri H. C. LINGA REDDY** (Malur).—

Will the Government be pleased to state :—

(*a*) whether it has come to their notice that one Sri Ramadesikan, a former Head Clerk of the Town Municipal Office, Srinivasapur, is missing since 4th May 1957 shortly after the surprise visit of the Minister for Local Self-Government to the Municipal Office in connection with the alleged misappropriation of the Municipal funds;

(*b*) the steps they have taken to trace him ?

A.—**Sri R. CHENNIGARAMAIAH** (Minister for Local Self-Government). —

(*a*) Yes.

(*b*) He was traced in June 1957.

Sri H. C. LINGA REDDY.—May I know the reasons that were subsequently found for the missing of this person ?

Sri R. CHENNIGARAMAIAH.—He has been traced out subsequently.

Sri H. C. LINGA REDDY.—Is a case of murder registered against anybody ?

Sri R CHENNIGARAMAIAH.—They registered a case under section 302 and subsequently since the person was traced out in the month of June, the question was dropped.

Sri H. C. LINGA REDDY.—Has the Minister for Local self-Government anything to do with the missing of the person ?

Sri R. CHENNIGARAMAIAH.—He has nothing to do with the missing of the person

Sri J. B. MALLARADHYA.—Under whose complaint the case was registered ?

Sri R. CHENNIGARAMAIAH.—The complaint made by the brother of the missing person.

Sri C. J. MUCKANNAPPA.—After the tracing of the clerk, how did the police withdraw this charge-sheet under section 302, Sir ? A person was charge-sheeted and F.I.R. was sent and a case of murder was registered. After two or three months, this man was traced. What happened to the charge-sheet ? May I know under what provision of the law that charge-sheet was withdrawn ?

Sri R. CHENNIGARAMAIAH.—Sir, a person was reported to be missing on 4th May 1957. The date of the complaint was 10th May 1957. He was traced in some village known as Kodigenahally near Madhugiri in the month of June. It is only after a month he was traced. Not after 6 or 7 months.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—(*a*) ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಡಲಾಗಿದೆ. ಹಾಗಾದರೆ ಹಣ ದುರುಪಯೋಗವಾಗಿದೆಯೆಂದು ನೀವು ಒಪ್ಪಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಆರ್. ಚೆನ್ನಿಗರಾಮಯ್ಯ,—ಅವರು ಮಿಸ್ ಅಪ್ರೊಪ್ರಿಯೇಷನ್ ಮಾಡಿದ್ದಾರೆಂದು ಹೇಳಿಲ್ಲ, ಮಿಸ್ ಆಗಿರುವುದು ನಿಜ ಎಂದು ಹೇಳಿದೆ.

ಶ್ರೀ ಎಚ್. ವೆಂಕಟರೆಡ್ಡಿ.—ಈ ಸಂಬಂಧದಲ್ಲಿ ಅವರು ಓಡಿಹೋಗಿದ್ದರೆಂಬುದನ್ನು ಒಪ್ಪುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹಾಗಿಲ್ಲವೇ ಇಲ್ಲ, ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ವಿಚಾರ ಇಕ್ವೆಸ್ಟಿಗೇಟ್ ಮಾಡಿದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾಡುತ್ತಿದ್ದಾರೆ. ಈ ಮಧ್ಯೆ ಅತ ಸಿಕ್ಕಿದ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಸಂಬಂಧದಲ್ಲಿ ಯಾರನ್ನಾದರೂ ಅರೆಸ್ಟ್ ಮಾಡಿದರೇ ಎಂಬುದನ್ನು ಮತ್ತು ತಪಶೀಲನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ತಪಶೀಲು ಹೇಳುವುದಕ್ಕೆ ಸಾಧ್ಯವಿಲ್ಲ. ಪರ್ಸನ್ ಟ್ರೇಸ್ ಆಗಿದ್ದಾನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೈಕೋರ್ಟಿನಲ್ಲಿ ಯಾವುದಾದರೂ ಕೇಸ್ ಪೆಂಡಿಂಗ್ ಇದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ವಿಚಾರದಲ್ಲಿ ಪೆಂಡಿಂಗ್ ಯಾವುದೂ ಇಲ್ಲ. ಪ್ರೊಸಿಡೆಂಟ್ ಮೇಲೆ ಕೇಸು ಹಾಕಿರುವುದು ಪೆಂಡಿಂಗ್‌ನಲ್ಲಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಮಿಸ್ ಅಪ್ರೊಪ್ರಿಯೇಷನ್ ಆಗಿದೆಯೆಂದು ಹೇಳಿದ್ದೀರಿ. ಅದಕ್ಕೆ ರಾಮದೇಶಿಕರ್ ಅವರೇ ಕಾರಣವೆಂದು ಸರ್ಕಾರಕ್ಕೆ ತಿಳಿದುಬಂದಿದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಆ ಮನುಷ್ಯ ಯಾವಾಗ, ಎಲ್ಲಿ ಸಿಕ್ಕಿದ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಜೂನ್ ತಿಂಗಳಿನಲ್ಲಿ ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಗ್ರಾಮದಲ್ಲಿ ಸಿಕ್ಕಿದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೇಗೆ ಅತನನ್ನು ಪತ್ತೆ ಹಚ್ಚಲಾಯಿತು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರ ಸಹೋದರರಾದ ದೇಶಿಕಾಚಾರ್ ಅವರು ದೂರುಕೊಟ್ಟರು. ಅದರ ಮೇಲೆ ಕೇಸು ಹಾಕಿದರು. F.I.R. ಕೊಟ್ಟಿಲ್ಲ.

ಡಾ॥ ಟಿ. ಪಾರ್ಥಸಾರಥಿ.—ರಾಮದೇವಶಿಕರ್ಅವರನ್ನು ಕೆಲಸದ ಮೇರೆ ಪುನಃ ತೆಗೆದುಕೊಂಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ತೆಗೆದುಕೊಂಡಿರಬಹುದು.

ಡಾ॥ ಟಿ. ಪಾರ್ಥಸಾರಥಿ.—ಅಬ್‌ಸ್ಕಾಂಡಿಂಗ್ ಪೀರಿಯಡ್ ಹೇಗೆ ಟ್ರೀಟ್ ಮಾಡಿದ್ದಾರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—302ನೆಯ ಸೆಕ್ಷನ್ ಪ್ರಕಾರ F.I.R. ಕೊಟ್ಟರೆಂದು ಮೊದಲು ಹೇಳಿದರು. ಈಗ ಇಲ್ಲವೆಂದು ಮತ್ತೆ ಹೇಳಿದರು. ಇದರಲ್ಲಿ ಯಾವುದು ನಿಜ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕಂಪ್ಲೆ ೈಂಟ್ ಮೇಲೆ ಕೇಸ್ ರಿಜಿಸ್ಟರು ಮಾಡಿಕೊಂಡರು ಅಷ್ಟೆ.

Construction of Causeway across Suvarnamukhihalla.

Q.—867. Sri T. TARE GOWDA (Sira).—

Will the Government be pleased to state :—

(*a*) whether representations have been made to the Deputy Commissioner. Executive Engineer, Chief Engineer for Roads and the Government to prepare an estimate for a high level or a low level causeway with 2 or 3 vents across Suvarnamukhihalla near Tavarekere, Sira taluk, on Tavarekere-Hosur-Bevanalli District Board road ;

(*b*) whether the estimate prepared was sanctioned by the President, District Board, Tumkur ;

(*c*) whether any amount has been provided in the budget of Tumkur District Board during 1957-58 for execution of the said work ;

(*d*) whether they would consider to sanction some special grant to take up this work in the Second Five-Year Plan in view of the hardships caused to the ryots and the public of the interior villages during rainy season ?

A.—Sri R. CHENNIGARAMAIAH (Minister for Local Self-Government).—

(*a*) No.
(*b*) No.
(*c*) No.
(*d*) This will be examined.

ಶ್ರೀ ಟಿ. ತಾರೇಗೌಡ.—(*a*) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದೆ. 1948-49ನೆಯ ಸಾಲಿನಲ್ಲೇ ಹಳ್ಳಕ್ಕೆ ಅಡ್ಡಲಾಗಿ ಟನಲ್ ಕಟ್ಟಲು ಅಂದಾಜು ಮಾಡಿ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮುಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಬಂದಿಲ್ಲ. ಈ ಪ್ರಶ್ನೆ ಹಾಕಿದಮೇರೆ ಸಂಬಂಧಪಟ್ಟ ಅಧಿಕಾರಿಗಳು ತನಿಖೆಮಾಡಿ ವರದಿ ಕಳುಹಿಸಿರುವ ಪ್ರಕಾರ ಅಂದಾಜು ತಯಾರಾಗಿಲ್ಲವೆಂದು ತಿಳಿದು ಬಂದಿದೆ

ಶ್ರೀ ಟಿ. ತಾರೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಿಂದೆ ಮುಂಜೂರಾಗಿದೆಯೆಂದು ತಿಳಿಸುತ್ತೇನೆ. ಇದನ್ನು ಪುನಃ ವಿಚಾರ ಮಾಡುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—1957ನೆಯ ಇಸವಿ ಆಕೊೀಬರ್ ತಿಂಗಳಲ್ಲಿ ತುಮಕೂರು ಜಿಲ್ಲಾಧಿಕಾರಿ ಆ ಗ್ರಾಮಗಳ ಕಡೆ ಬಂದಾಗ ಸಂಬಂಧಪಟ್ಟವರು ಅವರಲ್ಲಿ ಮನವಿ ಮಾಡಿಕೊಳ್ಳಲಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಟಿ. ತಾರೇಗೌಡ.—ಅಲ್ಲಿ ಕರಿಯಾಲ ಪ್ರಾಜೆಕ್ಟ್ ಕೆಲಸವಾಗುವಾಗ ಮದ್ದಕ್ಕಹಳ್ಳಿ ಸ್ಕೂೀನ್ ಕ್ವಾರಿಯಿಂದ ಈ ಹಳ್ಳದ ಮೇಲೆ ಕಲ್ಲು, ಜೆಲ್ಲರ್ಸ್, ಜಲ್ಲೆ ವಗೈರೆ ಲಾರಿಗಳಲ್ಲಿ ತೆಗೆದುಕೊಂಡು ಹೋಗುವುದಕ್ಕೆ ತೊಂದರೆಯಾಗಿದೆ, ಹಳ್ಳಕ್ಕೆ ಅಡ್ಡಲಾಗಿ ಕಾಸ್‌ವೇ ಮಾಡಬೇಕೆಂದು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಡಿಸ್ಟ್ರಿಕ್ಟ್ ಬೋರ್ಡಿಗೆ ತಿಳಿಸಲಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಹಳ್ಳಕ್ಕೆ ಕಾಸ್‌ವೇ ಹಾಕಬೇಕೆಂದು ಹೇಳಿ ಶ್ರೀಮಾನ್ ತಾರೇಗೌಡರು ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ ಇಂಜಿನಿಯರ್ ಪ್ರೆಸಿಡೆಂಟರಾಗಿದ್ದಾಗಲೇ ಅವರ ಅಧ್ಯಕ್ಷತೆಯಲ್ಲೇ ಒಂದು ನಿರ್ಣಯವಾಗಿ ಅದರಂತೆ ಎಸ್ಟಿಮೇಟ್ ಆಗಿ ಸ್ಯಾಂಕ್ಷನ್ ಆಗಿರಲಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಸ್ಟಿಮೇಟ್ ತಯಾರಾಗಿರಲಿಲ್ಲ.

ಶ್ರೀ ಎಸ್. ರಾಚಯ್ಯ.—ತಾವು ಈಗ ಕೊಟ್ಟ ಜವಾಬು ಸೆಕ್ರೆಟೇರಿಯಟ್‌ನಲ್ಲಿ ತಮಗೆ ದೊರೆತ ಜವಾಬೇ ಅಥವಾ ಜಿಲ್ಲಾ ಬೋರ್ಡಿನಿಂದ ಬಂದ ಜವಾಬೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಜಿಲ್ಲಾ ಬೋರ್ಡಿನಿಂದಲೇ ತರಿಸಿತ್ತಾರೆ. ರೆಗ್ಯುಲರ್ ಆಗಿ ಯಾವ ಎಸ್ಟಿಮೇಟೂ ತಯಾರಾಗಿಲ್ಲ. ಮತ್ತು ಅಂಥಾದ್ದು ಯಾವುದೂ ಮುಂಜೂರಾಗಿಲ್ಲ. ಅವರು information ಗಾಗಿ ಕೇಳಿದಾಗ ಬಹುಶಃ 10,000 ರೂಪಾಯಿ ಗಳಾಗಬಹುದೆಂದು ತಿಳಿಸಿರಬಹುದು

ಶ್ರೀ ಬಿ. ಎಸ್. ಶಂಕರಪ್ಪ.—ಎಸ್ಟಿಮೇಟ್ ಮುಂಜೂರಾಗದೆ ಇದ್ದರೂ ಚಿಂತೆಯಿಲ್ಲ. ತುಮಕೂರು ಜಿಲ್ಲಾ ಬೋರ್ಡಿನಿಂದ ಈ ರೀತಿಯಾಗಿ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿಲ್ಲವೇ ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಎಸ್. ಶಂಕರಪ್ಪ.—ಅವರಿಗೆ ಬೇಕಾದ ರಸ್ತೆಯನ್ನು ಮುಂಜೂರು ಮಾಡಿಕೊಳ್ಳುವುದು ಸರಿಯೆ ?

ಅಧ್ಯಕ್ಷರು.—ಅದು ಇಲ್ಲಿ ಏಳುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಶ್ರೀಮಾನ್ ಬಿ. ಹುಚ್ಚೇಗೌಡರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದ ಕಾಲದಲ್ಲಿ 1948-49ನೆಯ ಸಾಲಿನಲ್ಲಿ ಬೋರ್ಡಿನಲ್ಲಿ ಎಸ್ಟಿಮೇಟ್ ಆಗಿರುವುದು ನಿಜವಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನನಗೆ ಬಂದಿರುವ information ಪ್ರಕಾರ ಇಲ್ಲ.